


بسم الله الرّحمٰن الرّحيم

# ಸಾಹಿಬ್‌ಝಾದಿ ಅಮತುಲ್ ಖುದ್ದೂಸ್ ಬೇಗಂ ಸಾಹಿಬ: ಅಲ್ಲಾಹನ ನಿಜವಾದ ದಾಸಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15-09-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಈ ಲೋಕಕ್ಕೆ ಬರುವ ಪ್ರತಿಯೊಬ್ಬ ಮನುಷ್ಯನು ಒಂದು ನಿರ್ದಿಷ್ಟ ಕಾಲಾವಧಿಯನ್ನು ದಾಟಿಕೊಂಡು ಈ ಲೋಕವನ್ನು ಬಿಟ್ಟು ಹೋಗುತ್ತಾನೆ ಎಂಬುದು ಅಲ್ಲಾಹನ ಕಾನೂನು ಆಗಿದೆ. ಆದರೆ ಯಾರ ಕುರಿತು ಸವಿನೆನಪುಗಳು ಮಾತ್ರ ಬಾಕಿಯುಳಿತ್ತವೋ, ಯಾರು ಜನರಿಗೆ ಪ್ರಯೋಜನಕಾರಿಯಾಗಿರುತ್ತಾರೋ, ಯಾರು ದೀನಿಗೆ ಭೌತಿಕತೆ ಮೇಲೆ ಆದ್ಯತೆಯನ್ನು ತನ್ನ ಕೃತ್ಯಗಳಿಂದ ತೋರಿಸುತ್ತಾರೋ, ಯಾರು ಅಲ್ಲಾಹನ ಮತ್ತು ಪ್ರವಾದಿ(ಸ)ರ ಆಜ್ಞೆಗಳನ್ನು ಪಾಲಿಸಲು ಪ್ರಯತ್ನಿಸುವವರಾಗಿರುತ್ತಾರೋ, ಯಾರು ಹಝ್ರತ್ ಮಸೀಹ್ ಮೌಊದ್(ರ)ರಿಗೆ ಮಾಡಿದ ಬೈಅತ್ತಿನ ಹಕ್ಕನ್ನು ನೆರವೇರಿಸಲು ಪ್ರಯತ್ನಿಸುವವರಾಗಿರುತ್ತಾರೋ, ಯಾರು ಅಹ್ಮದಿಯಾ ಖಿಲಾಫತಿನೊಂದಿಗೆ ಯಥಾರ್ಥ ನಿಷ್ಠೆಯನ್ನು ಇರಿಸುವವರಾಗಿರುತ್ತಾರೋ, ಯಾರು ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಲು ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸುವವರಾಗಿರುತ್ತಾರೋ, ಯಾರು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಸದಾ ಪ್ರಯತ್ನಿಸುವವರಾಗಿರುತ್ತಾರೋ, ಯಾರಿಗಾಗಿ ಪ್ರತಿಯೊಬ್ಬರ ನಾಲಗೆಯಿಂದ ಪ್ರಶಂಸೆಯ ಮಾತುಗಳು ಮಾತ್ರ ಹೊರಡುತ್ತವೋ ಅಂಥವರು ಸೌಭಾಗ್ಯಶಾಲಿಗಳು. ಅಂಥವರಿಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನದ ಅನುಸಾರ ಸ್ವರ್ಗ ಸುನಿಶ್ಚಿತವಾಗಿರುತ್ತದೆ.

ಇಂದು ನಾನು ಅಂತಹ ಒಂದು ವ್ಯಕ್ತಿಯ ಬಗ್ಗೆ ಪ್ರಸ್ತಾಪಿಸುವೆನು. ಅವರು ತಮ್ಮ ಜೀವಿತವನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಸಾಗಿಸಲು ಪ್ರಯತ್ನಿಸಿದರು. ಈ ಪ್ರಸ್ತಾಪ ಸನ್ಮಾನ್ಯ **ಅಮತುಲ್ ಖುದ್ದೂಸ್** ಸಾಹಿಬ ಅವರದ್ದಾಗಿದೆ. ಅವರು ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)ರ ಪುತ್ರಿ ಮತ್ತು ಮರ್‌ಹೂಮ್ ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದರು ಹಾಗೂ ಹಝ್ರತ್ ಮುಸ್ಲಿಹ್ ಮೌಊದ್(ರ)ರ ಸೊಸೆಯಾಗಿದ್ದರು. ಇವರು ಖಾದಿಯಾನಿನಲ್ಲಿ ನೆಲೆಸಿದ್ದರು. ಆದರೆ ಸ್ವಲ್ಪ ಕಾಲಕ್ಕೆ ತನ್ನ ಪುತ್ರಿಯರನ್ನು ಭೇಟಿಯಾಗಲು ರಬ್ವಗೆ ಬಂದಿದ್ದರು. ಅಲ್ಲೇ ಅವರು ತನ್ನ 96ನೇ ವಯಸ್ಸಿನಲ್ಲಿ ಅಲ್ಲಾಹನ ವಿಧಿ ಪ್ರಕಾರ ನಿಧನಗೊಂಡರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಸಂಪತ್ತಿನ ಒಂಬತ್ತನೇ ಒಂದು ಭಾಗವನ್ನು ವಸಿಯ್ಯತ್ ಮಾಡಿದ್ದರು.

1951ರಲ್ಲಿ ಜಲ್ಸ ಸಾಲಾನದ ವೇಳೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ನಿಕಾಹನ್ನು ಅಮತುಲ್ ಖುದ್ದೂಸ್ ಸಾಹಿಬ ರೊಡನೆ ನಡೆಸಿದರು. ವಿವಾಹದ ವೇಳೆ ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಪುತ್ರನ ಕಡೆಯಿಂದ ಹೋಗುವುದಕ್ಕೆ ಬದಲಿಗೆ ಹುಡುಗಿಯ ಕಡೆಯಿಂದ ಪಾಲ್ಗೊಂಡಿದ್ದರು.

ಅಮತುಲ್ ಖುದ್ದೂಸ್ ಸಾಹಿಬರಿಗೆ ಅಲ್ಲಾಹನು ಮೂವರು ಪುತ್ರಿಯರನ್ನು ಮತ್ತು ಒಬ್ಬ ಪುತ್ರನನ್ನು ದಯಪಾಲಿಸಿದನು. ಅವರ ಮಗಳಾದ ಅಮತುಲ್ ಅಲೀಂ ಸಾಹಿಬ ಪಾಕಿಸ್ತಾನದಲ್ಲಿ ಲಜ್ನ ಸದರ್ ಆಗಿರುವರು. ಅವರು ತಹ್ರೀಕ್ ಜದೀದಿನ ವಕೀಲುಲ್ ಆಅ್‌ಲಾ ಆಗಿರುವ ಮನ್ಸೂರ್ ಅಹ್ಮದ್ ಖಾನ್ ಸಾಹಿಬ್‌ರ ಪತ್ನಿಯಾಗಿರುವರು. ಎರಡನೇ ಪುತ್ರಿಯಾದ ಅಮತುಲ್ ಕರೀಂ ಸಾಹಿಬ ಕ್ಯಾಪ್ಟನ್ ಮಾಜಿದ್ ಸಾಹಿಬ್‌ರ ಪತ್ನಿಯಾಗಿರುವರು. ಮೂರನೇ ಪುತ್ರಿಯಾದ ಅಮತುರ್ರಊಫ್ ಸಾಹಿಬ ಡಾಕ್ಟರ್ ಇಬ್ರಾಹೀಂ ಮುನೀಬ್ ಸಾಹಿಬ್‌ರ ಪತ್ನಿಯಾಗಿರುವರು. ಅವರ ಮಗನಾದ ಮಿರ್ಝಾ ಕಲೀಂ ಅಹ್ಮದ್ ಸಾಹಿಬ್ ಅಮೇರಿಕದಲ್ಲಿ ನೆಲೆಸಿರುವರು.

ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರು ತನ್ನ ವಿವಾಹದ ವೇಳೆ ಪಾಕಿಸ್ತಾನಕ್ಕೆ ಹೋಗಿದ್ದರು. ಅವರ ವಿವಾಹವಾಗಿ ಕೆಲವೇ ದಿನಗಳು ಆಗಿದ್ದುವು. ಅವರು ತನ್ನ ಪತ್ನಿಯನ್ನು ಖಾದಿಯಾನಿಗೆ ತನ್ನ ಜೊತೆ ಕರೆದುಕೊಂಡು ಹೋಗಲು ಕಾಗದಪತ್ರಗಳನ್ನು ತಯಾರು ಮಾಡುತ್ತಿದ್ದರು. ಇಂದಿನಂತೆ ಪಾಕಿಸ್ತಾನ ಮತ್ತು ಹಿಂದೂಸ್ತಾನದ ಸಂಬಂಧ ಹದಗೆಟ್ಟಿದ್ದ ಆ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರೊಡನೆ ಹೇಳಿದರು: ಪತ್ನಿಯ ಡೊಕ್ಯೂಮೆಂಟ್‌ಗಳು ಸರಿಯಾಗಬಹುದು. ನೀನು ಅದನ್ನು ಬಿಡು ಮತ್ತು ಬೇಗನೇ ಖಾದಿಯಾನಿಗೆ ಮರಳಿ ಹೋಗು. ಏಕೆಂದರೆ, ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದ ಯಾರಾದರೂ ಇರಬೇಕು. ಬೇಗನೇ ವಿಮಾನದಲ್ಲಿ ಸೀಟ್ ಬುಕ್ ಮಾಡು. ಸಾಮಾನ್ಯ ಫ್ಲೈಟ್ ಸಿಗದೇ ಹೋಗಿ ಚಾರ್ಟರ್ಡ್ ಫ್ಲೈಟ್ ಬುಕ್ ಮಾಡಬೇಕಾಗಿ ಬಂದರೂ ಕೂಡ ಹೋಗಲೇ ಬೇಕು. ನೀನು ನಿನ್ನ ಮಾದರಿಯನ್ನು ತೋರಿಸದಿದ್ದರೆ ಮತ್ತು ತ್ಯಾಗವನ್ನು ಮಾಡದಿದ್ದರೆ ಇತರ ಜನರು ಹೇಗೆ ತ್ಯಾಗ ಮಾಡುವರು.

ಇದು ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ತ್ಯಾಗವಾಗಿರುವುದರ ಜೊತೆಗೆ ಅಮತುಲ್ ಖುದ್ದೂಸ್ ಸಾಹಿಬ ರವರ ತ್ಯಾಗ ಕೂಡ ಆಗಿತ್ತು. ದಸ್ತಾವೇಜುಗಳು ಯಾವಾಗ ತಯಾರಾಗುವುವು ಎಂದು ಗೊತ್ತಿರಲಿಲ್ಲ. ವಿಷಮ ಘಟ್ಟವಾಗಿತ್ತು. ಈ ಎಲ್ಲದ್ದಕ್ಕೂ ಹೊರತಾಗಿ ಇದು ಖಲೀಫತುಲ್ ಮಸೀಹ್‌ರ ಆಜ್ಞೆಯಾಗಿತ್ತು. ಆದ್ದರಿಂದ ಅವರು ಬಹಳ ಸಂತೋಷದಿಂದ ತನ್ನ ಗಂಡನನ್ನು

ಬೀಳ್ಕೊಟ್ಟರು ಮತ್ತು ದೀನಿಗೆ ಲೌಕಿಕತೆ ಮೇಲೆ ಆದ್ಯತೆ ನೀಡಿದರು.

ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬ ರವರ ಕಾಗದಪತ್ರಗಳು ತಯಾರಾಗಲು ಸುಮಾರು ಒಂದು ವರ್ಷ ಹಿಡಿಯಿತು. ಅವರು ಖಾದಿಯಾನಿಗೆ ಹೋಗಲು ತಯಾರಾದಾಗ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳಿದರು: ಉಮ್ಮೇ ನಾಸಿರ್‌ನ ಮನೆಯಲ್ಲಿ ತಂಗಿರಿ. ಅಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರು ಬಹಳವಾಗಿ ನಡೆದಾಡಿದ್ದರು ಮತ್ತು ಅದರ ಅಂಗಳದಲ್ಲಿ ಹುಝೂರ್ ದರ್ಸ್ ಸಹ ನಡೆಸಿದ್ದರು. ಹಝ್ರತ್ ಮುಸ್ಲಿಹ್ ಮೌಊದ್[ರ] ಅವರೊಡನೆ ಹೀಗೆಯೂ ಹೇಳಿದರು: ಲಜ್ನದ ಜಮಾಅತುಗಳನ್ನು ಒಟ್ಟುಸೇರಿಸಬೇಕು. ಹೀಗೆ ಸಾಹಿಬ್‌ಝಾದಿ ಅಮತುಲ್ ಖುದ್ದೂಸ್ ಸಾಹಿಬ ಖಾದಿಯಾನಿಗೆ ಹೋಗಿ ಜಮಾಅತಿನ ಮಹಿಳೆಯರನ್ನು ಒಟ್ಟುಗೂಡಿಸಲು ಮತ್ತು ಅವರೊಡನೆ ಸಹಾನುಭೂತಿ ತೋರಿಸುವುದರಲ್ಲಿ ಹಿರಿದಾದ ಪಾತ್ರವನ್ನು ವಹಿಸಿಕೊಂಡರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[ರಹ್] ಲಂಡನಿಗೆ ತಲುಪಿದ ನಂತರ ನೀಡಿದ ಮೊದಲ ಖುತ್ಬದಲ್ಲಿ ಯುರೋಪಿನಲ್ಲಿ ಇಸ್ಲಾಮಿನ ಪ್ರಚಾರಕ್ಕಾಗಿ ಎರಡು ಕೇಂದ್ರಗಳನ್ನು ಸ್ಥಾಪಿಸಲು ಧನತ್ಯಾಗದ ಆಹ್ವಾನವನ್ನು ನೀಡಿದರು. ಆಗ ಸನ್ಮಾನ್ಯ ಅಮತುಲ್ ಖುದ್ದೂಸ್ ಸಾಹಿಬ ಭಾರತದ ಲಜ್ನ ಸದರ್ ಆಗಿದ್ದರು. ಅವರ ನೇತೃತ್ವದಲ್ಲಿ ಭಾರತದ ಲಜ್ನ ಇಮಾಇಲ್ಲಾಹ್ ಉತ್ಸಾಹದಿಂದ ತ್ಯಾಗ ಮಾಡಲು ಸೌಭಾಗ್ಯ ಪಡೆಯಿತು. ಅವರು ಸ್ವತಃ ಕೂಡ ತನ್ನೆಲ್ಲ ಆಭರಣಗಳನ್ನು ಈ ಯೋಜನೆಗಾಗಿ ಅರ್ಪಿಸಿದರು.

1991ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[ರಹ್] ಖಾದಿಯಾನಿಗೆ ಹೋದಾಗ, ಆ ಸಂದರ್ಭದಲ್ಲಿ ಅವರು ಖಾದಿಯಾನಿನ ಲಜ್ನದ ಧನತ್ಯಾಗಗಳನ್ನು ಬಹಳ ಆಕರ್ಷಕ ಶೈಲಿಯಲ್ಲಿ ಪ್ರಸ್ತಾಪಿಸಿದರು. ಅವರು ಹೇಳಿದರು: ಭಾರತದ ಲಜ್ನಗಳಲ್ಲಿ ಎಲ್ಲರ ಕುರಿತು ನನಗೆ ಹೇಳಲಿಕ್ಕಾಗದು. ಆದರೆ ಖಾದಿಯಾನಿನ ಲಜ್ನಗಳ ಕುರಿತು ಹೇಳುತ್ತೇನೆ. ಅವರು ಅಲ್ಲಾಹನ ಅನುಗ್ರಹದಿಂದ ಧನತ್ಯಾಗದಲ್ಲಿ ಅಪ್ರತಿಮವಾದ ಮಾದರಿಯನ್ನು ತೋರಿಸುವವರಾಗಿದ್ದಾರೆ.

ಅವರು ರಬ್ವದಿಂದ ಖಾದಿಯಾನ್‌ಗೆ ಹೋದ ಕೂಡಲೇ ಖಾದಿಯಾನಿನ ಲಜ್ನದ ಜನರಲ್ ಸೆಕ್ರಟರಿ ಆದರು. ಅನಂತರ 1955ರಲ್ಲಿ ಲೋಕಲ್ ಲಜ್ನ ಸದರ್ ಆದರು. ಅನಂತರ ಭಾರತದ ಲಜ್ನ ಇಮಾಇಲ್ಲಾಹ್ ಸದರ್ ಆದರು. 1999ರ ತನಕ ಅವರು ಈ ಸೇವೆಯಲ್ಲಿ ಇದ್ದರು. ಅವರ ಈ ಸೇವೆಗಳ ಕಾಲಾವಧಿ 46 ವರ್ಷಗಳು ಆಗಿದ್ದುವು.

ಅಮತುಲ್ ಖುದ್ದೂಸ್ ಸಾಹಿಬ ಪವಿತ್ರ ಖುರ್‌ಆನಿನ ಬಹಳ ಸೇವೆ ಮಾಡಿದರು. ಖಾದಿಯಾನಿನ 250 ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿದರು. ಭಾರತದಲ್ಲಿ ಎಫ್.ಎ. ಇತ್ಯಾದಿಗಳನ್ನು ಮಾಡಿದ ಹೆಣ್ಣುಮಕ್ಕಳು ಮೂರು ತಿಂಗಳು ಖಾದಿಯಾನಿಗೆ ಬಂದು ತಂಗುತ್ತಿದ್ದರು. ಅವರು ಆ ಮಕ್ಕಳಿಗೆ ಪವಿತ್ರ ಖುರ್‌ಆನಿನ ತರ್ಜುಮೆ ಕಲಿಸುತ್ತಿದ್ದರು. ಅವರು ಲಜ್ನವನ್ನು ಬಹಳ ಪರಿಶ್ರಮದಿಂದ ವ್ಯವಸ್ಥಾಪಿತಗೊಳಿಸಿದರು. ಅತಿಥಿ ಸತ್ಕಾರದ ಅಸಾಧಾರಣವಾದ ಗುಣ ಅವರಿಗೆ ಇತ್ತು. ಅವರ ಮಗಳು ಹೇಳುತ್ತಾರೆ: ಅವರು ನಮ್ಮ ತಂದೆಗೆ ಬಹಳ ಸಹಾಯಿಯಾಗಿ ಇದ್ದರು. ಬಹಳ ಬಡತನದ ಸ್ಥಿತಿಯಾಗಿತ್ತು. ಮಧ್ಯಾಹ್ನ ಕೇವಲ ಹೆಸರು ಕಾಳಿನ ಬೇಳೆ ಇರುತ್ತಿತ್ತು. ತಂದೆಯವರು ಹಾಲು ಮೊಸರಿಗಾಗಿ ಒಂದು ಎಮ್ಮೆಯನ್ನು ಸಾಕಿಕೊಂಡಿದ್ದರು. ಅತಿಥಿಗಳು ಬಂದರೆ ಔಪಚಾರಿಕತೆ ತೋರಿಸದೇ ಇದ್ದದ್ದನ್ನು ಮುಂದಿರಿಸುತ್ತಿದ್ದರು.

ಅವರು ಉತ್ತಮ ಪತ್ನಿಯಾಗಿದ್ದರು, ಕಷ್ಟತೆಯ ಸ್ಥಿತಿಯಲ್ಲಿ ಜೊತೆಗೆ ಇರುವವರಾಗಿದ್ದರು. ಅವರು ಯಾವುದೇ ಬೇಡಿಕೆಗಳನ್ನು ಇರಿಸುತ್ತಿರಲಿಲ್ಲ. ಲಭಿಸಿದ್ದರಲ್ಲೇ ಸಂತೋಷದಿಂದ ಜೀವನ ಸಾಗಿಸುತ್ತಿದ್ದರು. ಶುಚಿತ್ವವನ್ನು ಇಷ್ಟಪಡುತ್ತಿದ್ದ ಮತ್ತು ಬಹಳ ಚೊಕ್ಕಟವಾಗಿ ಇರುತ್ತಿದ್ದ ಮಹಿಳೆಯಾಗಿದ್ದರು. ಇಳಿ ವಯಸ್ಸಿನಲ್ಲಿ ಅವರ ಶ್ರವಣ ಶಕ್ತಿ ಕುಂದಿಹೋಗಿತ್ತು. ಉಪಕರಣಗಳ ಮೂಲಕ ಬಹಳ ಕಷ್ಟದಿಂದ ಆಲಿಸಬಹುದಾಗಿತ್ತು. ಹೀಗಿದ್ದರೂ ಬಹಳ ಸಂತೋಷದಿಂದ ಜೀವನ ಸಾಗಿಸಿದರು. ಕ್ಷೇಮ ವಿಚಾರಿಸುವಾಗ, ಯಾವಾಗಲೂ **ಅಲ್‌ಹಮ್ದುಲಿಲ್ಲಾಹ್** ಎಂದು ಹೇಳುತ್ತಿದ್ದರು. ಖಲೀಫತುಲ್ ಮಸೀಹ್‌ರ ಕಡೆಯಿಂದ ಯಾವುದೇ ಯೋಜನೆಯ ಆಹ್ವಾನ ಬಂದರೂ ಖಾದಿಯಾನಿನ ಮೊದಲ ಚಂದಾ ಮಿರ್ಝಾ ವಸೀಂ ಅಹ್ಮದ್ ಸಾಹಿಬ್ ಮತ್ತು ಅವರ ಪತ್ನಿಯ ಕಡೆಯಿಂದ ಬರುತ್ತಿತ್ತು. ಅವರ ಪುತ್ರಿ ಹೇಳುತ್ತಾರೆ: ನಾವು ಪವಿತ್ರ ಖುರ್‌ಆನನ್ನು ಓದುವಾಗ ತಪ್ಪಿದರೆ, ನಮ್ಮ ತಾಯಿ ಬೇರೆ ಕೊಠಡಿಯಲ್ಲಿ ಇದ್ದರೂ ಕೂಡ ಅಲ್ಲಿಂದಲೇ ಸರಿಪಡಿಸುತ್ತಿದ್ದರು. ಅವರಿಗೆ ಪವಿತ್ರ ಖುರ್‌ಆನ್ ಕಂಠಪಾಠವಿದೆ ಎಂದು ನಮಗೆ ಅನಿಸುತ್ತಿತ್ತು.

ರೋಗಾವಸ್ಥೆಯಲ್ಲೂ ಜನರ ಸುಖ ದುಃಖಗಳಲ್ಲಿ ಯಾವಾಗಲೂ ಭಾಗಿಯಾಗುತ್ತಿದ್ದರು. ಖಾದಿಯಾನಿನ ಹೆಣ್ಣು ಮಕ್ಕಳಿಗೆ ಹೊಲಿಗೆ ಕಲಿಸುತ್ತಿದ್ದರು. ಅವರು ಖಾದಿಯಾನಿನಲ್ಲಿ ಎಲ್ಲರೊಂದಿಗೆ ಬೆರೆತು ಬದುಕುವ ಸಂಪ್ರದಾಯವನ್ನು ಉಂಟು ಮಾಡಿದ್ದರು.

2005ರಲ್ಲಿ ರಬ್ವದಲ್ಲಿ ಲಜ್ನ ಇಮಾಯಿಲ್ಲಾಹ್ ಸರಾಯೆ ಮಸ್ರೂರ್ ಕಟ್ಟಡವನ್ನು ನಿರ್ಮಿಸಿದಾಗ ಅವರು ತನ್ನ ಗಂಡನ ಪರವಾಗಿ ಒಂದು ಲಕ್ಷ ರೂಪಾಯಿಯನ್ನು ಸಮರ್ಪಿಸಿದರು. ಭಾರತದ ವಿಭಜನೆಯ ನಂತರ ಲಾಹೋರಿನ ರತನ್ ಬಾಗ್‌ನಲ್ಲಿ, ರಬ್ವದ ಮನೆಗಳಲ್ಲಿ ಹಝ್ರತ್ ಅಮ್ಮಾ ಜಾನ್[ರ]ರಿಗೆ ಪವಿತ್ರ ಖುರ್‌ಆನ್ ಮತ್ತು ಮಲ್‌ಫೂಝಾತ್ ಓದಿ ಹೇಳಲು ಅವರಿಗೆ ಸೌಭಾಗ್ಯ ಲಭಿಸುತ್ತಿತ್ತು.

ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್ ನಿಧನಗೊಂಡ ನಂತರ ಸನ್ಮಾನ್ಯ ಇನಾಂ ಗೋರಿ ಸಾಹಿಬ್‌ರು ನಾಝಿರ್ ಅಅ್‌ಲಾ ಆದಾಗ ಅವರನ್ನು ಪರಿಪೂರ್ಣವಾಗಿ ಅನುಸರಿಸಿದರು. ಪ್ರತಿಯೊಂದು ಕೆಲಸಕ್ಕಾಗಿ ನಿಖರವಾದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸುತ್ತಿದ್ದರು.

ಅವರು ತಮ್ಮ ಹಿಸ್ಸಾ ಜಾಯಿದಾದ್ ಮತ್ತು ವಸಿಯ್ಯತ್ ಚಂದಾವನ್ನು ತಮ್ಮ ಜೀವಿತದಲ್ಲೇ ಪಾವತಿ ಮಾಡಿದ್ದರು. ಅದೇ ರೀತಿಯಲ್ಲಿ ತಹ್‌ರೀಕ್ ಜದೀದಿನ ದಫ್ತರ್ ಅವ್ವಲ್‌ನಲ್ಲಿ ಭಾಗಿಯಾಗಿದ್ದರು. ನಮಾಝನ್ನು ಅದರ ಆರಂಭ ಸಮಯದಲ್ಲೇ ನಿರ್ವಹಿಸಲು ಅವರು ಮಕ್ಕಳೊಡನೆ ಹೇಳುತ್ತಿದ್ದರು. ಅನೇಕ ಮಕ್ಕಳನ್ನು ಅವರು ಪಾಲನೆ–ಪೋಷಣೆ ಮಾಡಿದರು. ಅವರನ್ನು ಅತ್ಯುತ್ತಮವಾಗಿ ತರಬೇತಿ ಮಾಡಿದರು ಹಾಗೂ ಅವರ ವಿವಾಹಗಳನ್ನು ನಡೆಸಿಕೊಟ್ಟರು. ಆರ್ಥಿಕ ಸ್ಥಿತಿ ಬಹಳ ದುರ್ಬಲವಾಗಿದ್ದ ದರ್ವೇಶೀ ಕಾಲಘಟ್ಟದಲ್ಲಿ ಯಾವುದೇ ದರ್ವೇಶಿಯ ಮಗಳ ವಿವಾಹವಿದ್ದರೆ ತನ್ನ ಆಭರಣಗಳನ್ನು ಅವರಿಗೆ ಬೇಕಾದಷ್ಟು ಕಾಲ ಧರಿಸಲು ಕೊಡುತ್ತಿದ್ದರು. ಅನಂತರ ಬೇರೆ ಯಾವುದೇ ಹುಡುಗಿಯ ಮದುವೆಯ ಸಮಯದಲ್ಲಿ ಅವಳಿಗೆ ಅವುಗಳನ್ನು ನೀಡಲಾಗುತ್ತಿತ್ತು.

ಜನರು ತಮ್ಮ ಅಮಾನತ್ತುಗಳನ್ನು ಅವರ ಬಳಿ ಇರಿಸುತ್ತಿದ್ದರು. ಅವರು ಬಹಳ ಪ್ರಾಮಾಣಿಕತೆಯಿಂದ ಎಲ್ಲ ಅಮಾನತ್ತುಗಳನ್ನು ಜೋಪಾನವಾಗಿ ಇರಿಸುತ್ತಿದ್ದರು. ಅನೇಕ ಹುಡುಗಿಯರಿಗೆ ಶಿಷ್ಟಾಚಾರಗಳನ್ನು ಕಲಿಸಿಕೊಟ್ಟರು. ಅವರ ವಿವಾಹಕ್ಕೆ ಬೇಕಾದ ಆಭರಣಗಳನ್ನು ತಯಾರು ಮಾಡಿದರು, ದರ್ವೇಶಿಯರ ವಿಧವೆಗಳಿಗೆ ಈದಿ ನೀಡಲು ಸ್ವತಃ ಹೋಗುತ್ತಿದ್ದರು.

ಅವರ ಮುಂದೆ ಒಬ್ಬರ ವೈಭವಶಾಲಿ ಮನೆಯ ಕುರಿತು ಪ್ರಸ್ತಾಪಿಸಲಾದಾಗ, ಅವರು ಹೇಳಿದರು: ನಾನು ಅಲ್ಲಾಹನೊಡನೆ ಒಂದು ಮಾತನ್ನು ಹೇಳಿದ್ದೇನೆ. ನೀನು ನನಗೆ ಖಾದಿಯಾನಿನಲ್ಲಿ ಈ ಅನುಗ್ರಹೀತ ಮನೆಯಲ್ಲಿ ಇರಲು ಸಂದರ್ಭ ಒದಗಿಸಿ ಕೊಟ್ಟಿದ್ದೀಯ. ನನಗೆ ಇದೇ ಸಾಕು. ಆದರೆ ಸ್ವರ್ಗದಲ್ಲಿ ನನಗಾಗಿ ಖಂಡಿತವಾಗಿಯೂ ಒಂದು ವೈಭವಶಾಲಿ ಮನೆಯನ್ನು ನೀಡು.

ತಹಜ್ಜುದ್ ನಮಾಝನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಉಪವಾಸ ಇರಿಸಲು ಶಕ್ತಿಯಿದ್ದ ಕಾಲದ ವರೆಗೆ ಉಪವಾಸ ಇರಿಸುತ್ತಿದ್ದರು. ರಮಝಾನ್ ತಿಂಗಳಲ್ಲಿ ನಮಾಝಿಗಾಗಿ ಮಸೀದಿಗೆ ಹೋಗುತ್ತಿದ್ದರು.

ಅವರ ಪುತ್ರ ಹೇಳುತ್ತಾರೆ: ಹೆಚ್ಚಿನ ಅತಿಥಿಗಳು ದಾರುಲ್ ಮಸೀಹ್‌ನಲ್ಲಿ ತಂಗುತ್ತಿದ್ದರು. ಯಾವ ರೀತಿಯಲ್ಲಿ ಕೋಣೆಗಳಲ್ಲಿ ಅತಿಥಿಗಳ ಅಗತ್ಯಗಳ ಬಗ್ಗೆ ಕಾಳಜಿ ವಹಿಸಬೇಕೆಂದು 12, 13 ವರ್ಷ ಪ್ರಾಯದ ಮಕ್ಕಳಿಗೆ ನಮ್ಮ ತಾಯಿ ತರಬೇತಿ ಕೊಡುತ್ತಿದ್ದರು. ಸರ್ಕಾರಿ ಅಧಿಕಾರಿಗಳ ಪತ್ನಿಯಂದಿರಿಗೂ ಜಮಾಅತಿನ ಪರಿಚಯ ಮಾಡಿಕೊಡುತ್ತಿದ್ದರು. ಬಡವರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು.

ಸಾಹಿಬ್‌ಝಾದ ಮಿರ್ಝಾ ವಸೀಂ ಅಹ್ಮದ್ ಸಾಹಿಬ್‌ರ ನಿಧನದ ನಂತರ ಅವರು ಹತ್ತು ವರ್ಷಗಳ ಕಾಲ ಖಾದಿಯಾನಿನಲ್ಲಿ ಇದ್ದರು. ಅನಂತರ ಆರೋಗ್ಯ ಸ್ಥಿತಿ ಕೆಟ್ಟು ಹೋಗಲು ಶುರುವಾದಾಗ ಅವರ ಪುತ್ರಿಯರು ಅವರನ್ನು ರಬ್ವಗೆ ಚಿಕಿತ್ಸೆಗಾಗಿ ಕರಕೊಂಡು ಹೋದರು. ಆದರೂ ಖಲೀಫತುಲ್ ಮಸೀಹ್‌ರ ಅನುಮತಿ ಇಲ್ಲದೇ ನಾನು ದೀರ್ಘಕಾಲದ ವರೆಗೆ ಖಾದಿಯಾನಿನಿಂದ ಹೊರಗೆ ಇರುವುದಿಲ್ಲ ಎಂದು ಹೇಳುತ್ತಿದ್ದರು. ಅವರು ನನಗೆ ಈ ಕುರಿತು ಪತ್ರ ಬರೆದಿದ್ದರು. ನೀವು ಬಯಸುವಷ್ಟು ಕಾಲದ ವರೆಗೆ ಅಲ್ಲಿ ತಂಗಿರಿ ಎಂದು ನಾನು ಅವರೊಡನೆ ಹೇಳಿದ್ದೆ.

ಜಾಮಿಅ ಅಹ್ಮದಿಯಾ ಕೆನಡದಲ್ಲಿ ಕಲಿಯುತ್ತಿರುವ ಅವರ ಮೊಮ್ಮಗ ಅವರೊಡನೆ ಉಪದೇಶಿಸಲು ವಿನಂತಿಸಿದಾಗ ಅವರು ಹೇಳಿದರು: ಉಪದೇಶವನ್ನು ನೀನು ಖಲೀಫತುಲ್ ಮಸೀಹ್‌ರಿಂದ ಆಲಿಸುತ್ತಿದ್ದೀಯ. ಆದ್ದರಿಂದ ನಿನಗೆ ಉಪದೇಶ ನೀಡುವ ಅಗತ್ಯವಿಲ್ಲ. ಖಲೀಫತುಲ್ ಮಸೀಹ್‌ರ ಮಾತುಗಳನ್ನು ಗಮನವಿಟ್ಟು ಆಲಿಸು ಮತ್ತು ಅವುಗಳನ್ನು ಪಾಲಿಸು. ಅನಂತರ ಹೇಳುತ್ತಿದ್ದರು: ರಬ್ಬಿ ಕುಲ್ಲಿ ಶೈಇನ್ ಎಂಬ ದುಆ ಹೇಳುತ್ತಿರು. ತನ್ನ ವಖ್ಫನ್ನು ಪೂರ್ಣವಾಗಿ ನಿಭಾಯಿಸು ಮತ್ತು ಖಲೀಫತುಲ್ ಮಸೀಹ್‌ರ ಸಮರ್ಥ ಸಹಾಯಿ (ಸುಲ್ತಾನೇ ನಸೀರ್) ಆಗಿ ಇರು.

ಅನೇಕ ಮುಸ್ಲಿಮೇತರರು ಕೂಡ ಅವರ ಜನಾಝದಲ್ಲಿ ಭಾಗವಹಿಸಿದ್ದರು. ಖಾದಿಯಾನಿನ ಜನರು ಅವರನ್ನು ಮತ್ತು ಅವರು ಖಾದಿಯಾನಿನ ಜನರನ್ನು ಬಹಳ ಪ್ರೀತಿಸುತ್ತಿದ್ದರು. ಖಾದಿಯಾನಿನ ಮಹಿಳೆಯರ ಅನೇಕ ಪತ್ರಗಳು ಬಂದಿವೆ. ಅವರು ಬಹಳ ಪ್ರೀತಿಯಿಂದ ಅವರ ಪ್ರಸ್ತಾಪ ಮಾಡಿರುವರು. ಅದೇ ರೀತಿಯಲ್ಲಿ ಖಾದಿಯಾನಿನ ಹಳೆಯ ನಿವಾಸಿಗಳ ಗಂಡುಮಕ್ಕಳು ಕೂಡ ಪತ್ರ ಬರೆದಿರುವರು. ಅವರು ನಮ್ಮನ್ನು ತಾಯಿಯಂತೆ ಪರಿಪಾಲನೆ ಮಾಡಿದರು ಎಂದು ಹೇಳಿರುವರು.

ಖಿಲಾಫತಿನೊಂದಿಗೆ ಅವರಿಗೆ ಬಹಳ ನಿಷ್ಠೆಯ ಸಂಬಂಧವಿತ್ತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರೊಂದಿಗೆ ಅವರು ಇರಿಸಿದ ವಿನಯವಂತಿಕೆ ಮತ್ತು ಸಂಪೂರ್ಣ ನಿಷ್ಠೆಯ ಸಂಬಂಧ ಮುಂದುವರೆದಿತ್ತು ಮತ್ತು ನನ್ನೊಂದಿಗೂ ಅವರು ಅದೇ ಸಂಬಂಧವನ್ನು ನೆಲೆನಿಲ್ಲಿಸಿದ್ದರು. ಇದೊಂದು ಉದಾಹರಣೆಯಾಗಿದೆ. ಇಲ್ಲಿ ಕೂಡ ನನ್ನನ್ನು ಅತ್ಯಂತ ಗೌರವಾದರದಿಂದ ಭೇಟಿಯಾದರು. 2005ರಲ್ಲಿ ನಾನು ಖಾದಿಯಾನಿಗೆ ಹೋದಾಗ ಬಹಳ ಕಾಳಜಿಯಿಂದ ಅತಿಥಿ ಸತ್ಕಾರ ಮಾಡಿದ್ದರು. ಪ್ರತಿಯೊಂದು ಭೇಟಿಯ ವೇಳೆ ಬಹಳ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರು. ಅದು ಅವರ ಮುಖದಿಂದ ಪ್ರಕಟಗೊಳ್ಳುತ್ತಿತ್ತು. 2005ರಲ್ಲಿ ಆರೋಗ್ಯ ಸ್ಥಿತಿ ಕೆಟ್ಟಿದ್ದರೂ ಕೂಡ ಖಾದಿಯಾನಿನಿಂದ ಮರಳಿ ಹೋಗುವಾಗ ದೆಹಲಿ ತನಕ ಬಂದಿದ್ದರು.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ – ಆಮೀನ್.

ಖಾದಿಯಾನಿನ ಜನರನ್ನು ಅವರು ಎಂತಹ ಪ್ರೀತಿಯಲ್ಲಿ ಇರಿಸಿದ್ದರೋ ಅದೇ ಪ್ರೀತಿಯಿಂದ ಖಾದಿಯಾನಿನವರು ಪರಸ್ಪರ ಇರಲು ಅಲ್ಲಾಹನು ಸೌಭಾಗ್ಯ ನೀಡಲಿ. ಈಗ ಖಾದಿಯಾನಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದೊಂದಿಗೆ ನೇರವಾಗಿ ಸಂಬಂಧವಿರುವ ಯಾರೂ

ಇಲ್ಲ. ಯಾರಾದರೂ ಅಲ್ಲಿಗೆ ಹೋಗುವಂತಹ ಸ್ಥಿತಿ ಅಲ್ಲಾಹನು ಉಂಟುಮಾಡಲಿ.

(ಹುಝೂರ್ ಯು.ಕೆ.ಯ ಸನ್ಮಾನ್ಯ ಮುಹಮ್ಮದ್ ಅರ್‌ಶದ್ ಅಹ್ಮದೀ ಸಾಹಿಬ್‌ರ ಜನಾಝ ಹಾಝಿರ್ ಮತ್ತು ಆಫ್ರಿಕನ್ ಅಮೇರಿಕನ್ ಆದ ಸನ್ಮಾನ್ಯ ಅಹ್ಮದ್ ಜಮಾಲ್ ಸಾಹಿಬ್‌ರ ಜನಾಝ ಗ಼ಾಯಿಬ್ ನಿರ್ವಹಿಸುವುದಾಗಿ ಹೇಳಿದರು ಮತ್ತು ಅವರ ಬಗ್ಗೆ ಪ್ರಸ್ತಾಪಿಸಿದರು ಹಾಗೂ ಅವರ ಉನ್ನತ ಪದವಿಗಾಗಿ ದುಆ ಮಾಡಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّئَاتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَأْمُرُبِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۰ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ.


***Friday Sermon delivered by Hadrath Khaleefatul Masih Al Khamis**(atba)*

*At, **'Masjid Mubarak',** Islamabad, Tilford, UK.* On 15-09-2023

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon